ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಆನಂದರಾವ್ ವೃತ್ತ, ಬೆಂಗಳೂರು-560009

ಸಂಖ್ಯೆ: ಎನ್‌ವಿಬಿಡಿಸಿಪಿ/ಐಆರ್‌ಎಸ್‌12/2019-20 ದಿನಾಂಕ: 09.04.2020

## ಸುತ್ತೋಲೆ

ವಿಷಯ: ಎನ್‌ವಿಬಿಡಿಸಿಪಿ - 2020ನೇ ಸಾಲಿನ ಮೊದಲ ಸುತ್ತಿನ ಒಳಾಂಗಣ ಕೀಟನಾಶಕ ಸಿಂಪಡಣಾ ( ಎಸ್ ಪಿ 10%) ಚಟುವಟಿಕೆಯ ಕುರಿತು.

ಉಲ್ಲೇಖ: ಈ ನಿರ್ದೇಶನಾಲಯದ ಸುತ್ತೋಲೆ ಸಮ ಸಂಖ್ಯೆ, ದಿನಾಂಕ:31.1.2020

2. ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿ – Malaria & COVID – 19 Pandemic, ದಿನಾಂಕ: 27.3.2020.
3. ನಿರ್ದೇಶಕರು, ಎನ್‌ವಿಬಿಡಿಸಿಪಿ - ಭಾರತ ಸರ್ಕಾರ, ಇವರ ಈ- ಮೇಲ್ ದಿನಾಂಕ:8.4.2020.

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1) ರ ಅನ್ವಯ ನಿಮ್ಮ ಜಿಲ್ಲೆಯ ಆಯ್ದ ಉಪಕೇಂದ್ರಗಳು/ ಗ್ರಾಮಗಳಲ್ಲಿ ದಿನಾಂಕ 1 ಮಾರ್ಚ್ 2020 ರಿಂದ ಪ್ರಾರಂಭಿಸಿ 30 ಏಪ್ರಿಲ್ 2020ರ ಒಳಗೆ ಮೊದಲ ಸುತ್ತಿನ ಒಳಾಂಗಣ ಕೀಟನಾಶಕ ಸಿಂಪಡಣಾ ಚಟುವಟಿಕೆಯನ್ನು ಪೂರ್ಣಗೊಳಿಸಲು ಸೂಚಿಸಲಾಗಿತ್ತು. ಕೆಲವು ಜಿಲ್ಲೆಗಳಲ್ಲಿ ನಿಗದಿತ ಅವಧಿಯಲ್ಲಿ ಈ ಚಟುವಟಿಕೆಯು ಪೂರ್ಣಗೊಂಡಿರುವುದನ್ನು ಗಮನಿಸಲಾಗಿದೆ.

ಉಲ್ಲೇಖ (2) ಹಾಗೂ (3) ರ ಅನ್ವಯ, ಕೋವಿಡ್ – 19ನ ಆರೋಗ್ಯ ತುರ್ತು ಪರಿಸ್ಥಿತಿಯಿಂದಾಗ್ಯೂ ಸಹ, ಮಲೇರಿಯಾ ನಿವಾರಣಾ ಚಟುವಟಿಕೆಗಳನ್ನು ಮುಂದುವರೆಸುವುದು ಅಗತ್ಯವಾಗಿದ್ದು, ಇದರಿಂದ ಮಾತ್ರವೇ, ಇಲ್ಲಿಯವರೆಗೂ ಮಲೇರಿಯಾ ನಿವಾರಣೆಯ ದಿಕ್ಕಿನಲ್ಲಿನ ಸಾಧನೆಗಳನ್ನು ಉಳಿಸಿಕೊಳ್ಳಲು ಸಾಧ್ಯವಾಗುತ್ತದೆ.

ಆದ್ದರಿಂದ ಸಿಂಪಡಣಾ ಚಟುವಟಿಕೆಯು ಇನ್ನೂ ಬಾಕಿ ಇರುವ ಜಿಲ್ಲೆಗಳಲ್ಲಿ, ಜಿಲ್ಲಾಡಳಿತದ ಸೂಕ್ತ ಅನುಮತಿಯೊಂದಿಗೆ ಕೆಳಕಂಡ ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡು ಕೀಟನಾಶಕ ಸಿಂಪಡಣಾ ಕಾರ್ಯವನ್ನು ಪೂರ್ಣಗೊಳಿಸಲು ಸೂಚಿಸಲಾಗಿದೆ.

1. ಗ್ರಾಮ ಪಂಚಾಯತ್ ಅಧ್ಯಕ್ಷರು ಹಾಗು ಪಿ ಡಿ ಓ ಗಳ ನೇತೃತ್ವದಲ್ಲಿ, ಗ್ರಾಮಸ್ಥರಿಗೆ ಒಳಾಂಗಣ ಕೀಟನಾಶಕ ಸಿಂಪಡಣಾ ಚಟುವಟಿಕೆಗೆ ಸೂಕ್ತ ಸಹಕಾರವನ್ನು ನೀಡುವಂತೆ ಪೂರ್ವಭಾವಿಯಾಗಿ ಮಾಹಿತಿ ನೀಡುವುದು.
2. ಪ್ರಸ್ತುತ ಸಾರಿಗೆ ವ್ಯವಸ್ಥೆ ಲಭ್ಯವಿಲ್ಲದಿರುವುದರಿಂದ, ಸ್ಥಳೀಯ ವ್ಯಕ್ತಿಗಳನ್ನು ಸ್ಪ್ರೇ ಮೆನ್ ಗಳಾಗಿ ಬಳಕೆ ಮಾಡುವುದು.
3. ಸ್ಪ್ರೇ ಮೆನ್‌ಗಳ ಆರೋಗ್ಯ ಸ್ಥಿತಿಯನ್ನು ಪ್ರತಿದಿನ ಖಚಿತ ಪಡಿಸಿಕೊಂಡ ನಂತರ, ಅವರನ್ನು ಸಿಂಪಡಣಾ ಕಾರ್ಯದಲ್ಲಿ ತೊಡಗಿಸುವುದು.
4. ಸ್ಪ್ರೇ ಮೆನ್‌ಗಳಲ್ಲಿ ಜ್ವರ, ನೆಗಡಿ, ಕೆಮ್ಮು ಇತ್ಯಾದಿ ಲಕ್ಷಣಗಳು ಕಂಡು ಬಂದಲ್ಲಿ ಅವರನ್ನು ತಕ್ಷಣವೇ ವೈದ್ಯರ ಬಳಿ ಕಳುಹಿಸುವುದು ಹಾಗೂ ವೈದ್ಯರ ಸಲಹೆಗಳನ್ನು ಪಾಲಿಸುವುದು.

Scanned by CamScanner

5. ಸಿಂಪಡಣಾ ಅವಧಿಯಲ್ಲಿ ಸ್ಪ್ರೇ ಮೆನ್‌ಗಳು ಕಡ್ಡಾಯವಾಗಿ ಸ್ವಯಂ ರಕ್ಷಣಾ ಸಾಮಗ್ರಿಗಳಾದ ಗ್ಲೋವ್‌ಗಳು, ಮಾಸ್ಕ್, ಕ್ಯಾಪ್ ಮತ್ತು ಗಾಗಲ್ ಗಳನ್ನು ಕಡ್ಡಾಯವಾಗಿ ಧರಿಸುವಂತೆ ಸೂಚಿಸುವುದು.
6. ಸಿಂಪಡಣೆ ಮಾಡುವಾಗ ಮನೆಯ / ಸಮುದಾಯದ ಸದಸ್ಯರೊಂದಿಗೆ ಸಾಮಾಜಿಕ ಅಂತರವನ್ನು ಕಡ್ಡಾಯವಾಗಿ ಕಾಯ್ದುಕೊಳ್ಳುವುದು. ಹಾಗೂ ಯಾವುದೇ ಕಾರಣಕ್ಕೂ ಸಾರ್ವಜನಿಕರು ಗುಂಪುಗೂಡದಂತೆ ಎಚ್ಚರ ವಹಿಸಬೇಕು.
7. ಕೀಟನಾಶಕ ಸಿಂಪಡಣೆಯ ಉಸ್ತುವಾರಿ ನಡೆಸುವ ಆರೋಗ್ಯ ಸಿಬ್ಬಂದಿ / ಆಶಾ ಸ್ವಯಂಸೇವಕರೂ ಸಹ ಸ್ವಯಂ ರಕ್ಷಣಾ ಸಾಮಗ್ರಿಗಳನ್ನು ಧರಿಸುವುದು ಹಾಗೂ ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳುವುದು.
8. ಕೀಟನಾಶಕ ಸಿಂಪಡಣೆಯ ಪ್ರದೇಶವು ಕೋವಿಡ್ – 19ರ Hot spot / Containment Zone/ Buffer Zone ಆಗಿದ್ದಲ್ಲಿ, ಸಿಂಪಡಣೆ ಮಾಡಬೇಕೆ , ಬೇಡವೇ ಎಂಬುದನ್ನು ಕೋವಿಡ್ – 19ರ ಮಾರ್ಗಸೂಚಿಯ ಅನ್ವಯ ನಿರ್ಧರಿಸುವುದು.
9. ಸಿಂಪಡಣಾ ಕಾರ್ಯಕ್ಕೆ ತಗಲುವ ವೆಚ್ಚವನ್ನು NHM- NVBDCP Lineitem : Spray wages , FMR Code : 3.2.5.1.1 ನ ಅಡಿಯಲ್ಲಿ ಲಭ್ಯವಿರುವ ಅನುದಾನದಲ್ಲಿ ನಿಯಮಾನುಸಾರ ಬಳಸುವುದು.
10. ಉಳಿದಂತೆ, ಒಳಾಂಗಣ ಕೀಟನಾಶಕ ಸಿಂಪಡಣೆಯ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸುವುದು ಮತ್ತು ವರದಿಯನ್ನು ಮೇ 4 2020 ರ ಒಳಗೆ ಸಲ್ಲಿಸಲು ಸೂಚಿಸಿದೆ.

ಎಚ್ಚರವಿರಲಿ., ಭಯಬೇಡ

10/4/20

ಅಭಿಯಾನ ನಿರ್ದೇಶಕರು
ರಾಷ್ಟ್ರೀಯ ಆರೋಗ್ಯ ಅಭಿಯಾನ

**ಇವರಿಗೆ,**
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು,
-------- ಜಿಲ್ಲೆ.

**ಪ್ರತಿಯನ್ನು** ಮಾಹಿತಿ ಹಾಗು ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.

1. ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿಗಳು, ------ ಜಿಲ್ಲೆ.
2. ಉಪ ನಿರ್ದೇಶಕರು, ರಾಜ್ಯ ಸರ್ವೆಲೆನ್ಸ್ ಘಟಕ, ಆನಂದರಾವ್ ವೃತ್ತ, ಬೆಂಗಳೂರು.
3. ವಿಭಾಗೀಯ ಜಂಟಿ ನಿರ್ದೇಶಕರು, ಬೆಂಗಳೂರು/ಮೈಸೂರು/ಬೆಳಗಾವಿ/ ಕಲಬುರಗಿ ವಿಭಾಗ.
4. ಹಿರಿಯ ಪ್ರಾದೇಶಿಕ ನಿರ್ದೇಶಕರು, ಪ್ರಾದೇಶಿಕ ಕಛೇರಿ– ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಕೇಂದ್ರೀಯ ಸದನ, ಕೋರಮಂಗಲ, ಬೆಂಗಳೂರು.

**ಪ್ರತಿಯನ್ನು** ಅವಗಾಹನೆಗಾಗಿ ಸಲ್ಲಿಸಿದೆ.

1. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಆನಂದರಾವ್ ವೃತ್ತ, ಬೆಂಗಳೂರು.

Scanned by CamScanner